# ವಿಪತ್ತು ನಿರ್ವಹಣಾ ಮತ್ತು ಪಶ್ಚಿಮಘಟ್ಟ ಅಧ್ಯಯನ ಕಾರ್ಯಕ್ರಮ

## ಪ್ರಸ್ತಾವನೆ

"ಶೌರ್ಯ" ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಕಾರ್ಯಕ್ರಮವು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಕಲ್ಪನೆಯಿಂದ ಹೊರಬಂದಿರುವ ಅಪೂರ್ವ ಕಾರ್ಯಕ್ರಮವಾಗಿದೆ. ವಿಪತ್ತು ಸೇವಾ ಕಾರ್ಯಕ್ರಮವು ಪ್ರಾಕೃತಿಕ ಅಥವಾ ಮಾನವನಿರ್ಮಿತ ವಿಪತ್ತಿನಂತಹ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸ್ಪಂದನೆ ನೀಡುವ ಕಾರ್ಯಕ್ರಮವಾಗಿದೆ. ಆಪತ್ತಿನ ಸಮಯದಲ್ಲಿ ನೆರವಿಗೆ ಧಾವಿಸಲು ಸಜ್ಜಾಗಿ ನಿಲ್ಲಬಲ್ಲ ತಜ್ಞತೆ ಹೊಂದಿದ ಯುವಕರ ತಂಡವನ್ನು ಈ ಕಾರ್ಯಕ್ರಮದ ಅಡಿಯಲ್ಲಿ ರಚಿಸಲಾಗಿದೆ. ಸಮಯದ ಮುಖ ನೋಡದೇ, ಸಂಬಂಧಗಳು, ಜಾತಿ, ಧರ್ಮವನ್ನು ತಾಳೆ ಹಾಕದೆ, ಯಾರೇ ಸಂಕಷ್ಟಕ್ಕೆ ಒಳಗಾಗಲಿ, ವಿಪತ್ತಿಗೆ ತುತ್ತಾಗಿರಲಿ, ಅವರಿಗೆ ತತ್‌ಕ್ಷಣ ಆಸರೆಯಾಗಬಲ್ಲ ಯುವಕರ ಗುಂಪು "ಶೌರ್ಯ" ತಂಡವಾಗಿದೆ.

"ಶೌರ್ಯ" ತಂಡದಲ್ಲಿ ಸದಸ್ಯತ್ವ ಪಡೆದಿರುವ ಸದಸ್ಯರು ವಿಪತ್ತು ನಿರ್ವಹಣೆಯ ವಿಷಯದಲ್ಲಿ ತಜ್ಞತೆ ಹೊಂದಿರುವುದು ಮಾತ್ರವಲ್ಲದೆ, ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಅಗ್ನಿಶಾಮಕದಳ, ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಜನಪ್ರತಿನಿಧಿಗಳು, ಮುಖಂಡರು, ಸಂಘ ಸಂಸ್ಥೆಗಳು ಹಾಗೂ ವಿವಿಧ ಅಧಿಕಾರಿಗಳ ಪರಿಚಯ ಹೊಂದಿರುತ್ತಾರೆ. ಯಾವ ವಿಪತ್ತಿಗೆ ಯಾರೊಂದಿಗೆ ಸಂವಹನ ನಡೆಸಬೇಕೆಂಬ ಮಾಹಿತಿ ವಿಪತ್ತು ನಿರ್ವಹಣೆ ಘಟಕದ ಸ್ವಯಂಸೇವಕರಲ್ಲಿರುತ್ತದೆ. ಸಮವಸ್ತ್ರದಲ್ಲಿ ಕಾಣಿಸಿಕೊಳ್ಳುವ, ತುರ್ತು ಸ್ಪಂದನೆಗೆ ಸದಾ ಸಿದ್ಧರಿರುವ ಈ ಯುವಕರ ತಂಡ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ (ರಾಷ್ಟ್ರೀಯ ತುರ್ತು ಸ್ಪಂದನೆ ಪಡೆ) ರಾಜ್ಯ ಸರ್ಕಾರದ ಎಸ್.ಡಿ.ಆರ್.ಎಫ್ (ರಾಜ್ಯ ತುರ್ತು ಸ್ಪಂದನೆ ಪಡೆ) ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗ್ರಹರಕ್ಷಕ ದಳ, ವಿವಿಧ ಸಂಘ ಸಂಸ್ಥೆಗಳಿಂದ ತರಬೇತಿಯನ್ನು ಪಡೆದಿರುತ್ತದೆ. ದುರಂತಗಳನ್ನು ಎದುರಿಸಲು ಸದಾ ಸಿದ್ಧವಿರುತ್ತದೆ.

## ವಿಪತ್ತು ಸೇವಾ ಕಾರ್ಯಕ್ರಮದ ಲೋಕಾರ್ಪಣೆ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣೆ ಕಾರ್ಯಕ್ರಮವನ್ನು ಪರಮಪೂಜ್ಯ ಖಾವಂದರು ಜೂನ್ 22, 2020 ರಂದು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಲೋಕಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಬೆಳ್ತಂಗಡಿ ವಿಪತ್ತು ನಿರ್ವಹಣೆ ಘಟಕದ ಸ್ವಯಂಸೇವಕರಿಗೆ ರಾಷ್ಟ್ರೀಯ ವಿಪತ್ತು ಸ್ಪಂದನೆ ಪಡೆಯ ಮೂಲಕ (ಎನ್.ಡಿ.ಆರ್.ಎಫ್) ನಡೆಯುವ ತರಬೇತಿ ಕಾರ್ಯಾಗಾರದ ಉದ್ಘಾಟನೆ ನೆರವೇರಿಸಿದರು. ವಿಪತ್ತು ನಿರ್ವಹಣೆಗೆ ಅಗತ್ಯವಿರುವ ಪರಿಕರಗಳನ್ನು ಇದೇ ಸಂದರ್ಭ ಸ್ವಯಂಸೇವಕರಿಗೆ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಯೋಜನೆಯ ಟ್ರಸ್ಟಿಯವರಾದ ಶ್ರೀ ಸುರೇಂದ್ರಕುಮಾರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹರೀಶ್‌ಕುಮಾರ್, ಬೆಳ್ತಂಗಡಿ ತಾಲ್ಲೂಕಿನ ತಹಶೀಲ್ದಾರರಾದ ಶ್ರೀ ಗಣಪತಿ ಶಾಸ್ತ್ರಿ, ಎನ್.ಡಿ.ಆರ್.ಎಫ್ 10 ನೇ ಬೆಟಾಲಿಯನ್‌ನ ಟೀಮ್ ಕಮಾಂಡಿಂಗ್ ಆಫೀಸರ್ ಶ್ರೀ ಗೋಪಾಲ್ ಲಾಲ್ ಮೀನಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಡಾ. ಎಲ್. ಎಚ್. ಮಂಜುನಾಥ್‌ರವರ ಉಪಸ್ಥಿತಿ ಹಾಗೂ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ನೆರವೇರಿತು. ಸಿ.ಓ.ಓ ಶ್ರೀ ಅನಿಲ್ ಕುಮಾರ್ ಎಸ್.ಎಸ್, ಕೇಂದ್ರ ಕಚೇರಿಯ ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಜನಜಾಗೃತಿ ವೇದಿಕೆಯ ನಿರ್ದೇಶಕರು, ತರಬೇತಿ ಸಂಸ್ಥೆಯ ನಿರ್ದೇಶಕರು, ಪ್ರಾಂಶುಪಾಲರು, ಬೆಳ್ತಂಗಡಿ ತಾಲ್ಲೂಕು ಯೋಜನಾಧಿಕಾರಿಗಳು ಹಾಗೂ ಸಿಬ್ಬಂದಿಗಳು, ಎನ್.ಡಿ.ಆರ್.ಎಫ್‌ನ ಸಿಬ್ಬಂದಿಗಳು ಉಪಸ್ಥಿತರಿದ್ದರು.



## ಸಂಘಟನೆ ಮತ್ತು ಸ್ವರೂಪ



ಪ್ರಾಕೃತಿಕ ದುರಂತಗಳ ನಿರ್ವಹಣೆಗೆಂದು ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್.ಡಿ.ಎಮ್.ಎ) ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವಿದೆ (ಎಸ್.ಡಿ.ಎಮ್.ಎ) ಪ್ರತೀ ಜಿಲ್ಲೆಗಳಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು (ಡಿ.ಡಿ.ಎವ್.ಎ) ಸಕ್ರೀಯವಾಗಿವೆ. ಇವುಗಳ ಹೊರತಾಗಿ ಸ್ಥಳೀಯ ಭೌಗೋಳಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ರಚಿಸಲ್ಪಟ್ಟ ವಿಪತ್ತು ನಿರ್ವಹಣಾ ಸಮಿತಿಗಳಿವೆ. ಅಗ್ನಿಶಾಮಕದಳ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹೀಗೆ ಸರ್ಕಾರದ ಎಲ್ಲಾ ಇಲಾಖೆಗಳು ಸಾರ್ವಜನಿಕರು ಸಂಕಷ್ಟದಲ್ಲಿರುವಾಗ ತಮ್ಮ ಜವಾಬ್ದಾರಿ ಮೆರೆಯುತ್ತಿವೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ "ಶೌರ್ಯ" ವಿಪತ್ತು ಸೇವಾ ಕಾರ್ಯಕ್ರಮ' ಇವುಗಳ ಸಹಭಾಗಿತ್ವ ಹಾಗೂ ನೆರವಿನಿಂದ ಅನುಷ್ಠಾನಗೊಳ್ಳುತ್ತಿದೆ. ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣೆ ಘಟಕದ ಸಂಘಟನೆಯ ಸ್ವರೂಪ ಈ ಕೆಳಗಿನಂತಿದೆ.


## ಸಮಾಲೋಚನೆ ಸಭೆಗಳು

ವಿಪತ್ತು ನಿರ್ವಹಣೆಯ ತಾಲ್ಲೂಕು ಘಟಕಕ್ಕೆ ಸ್ವಯಂಸೇವಕರ ಆಯ್ಕೆ ಮಾಡುವ ಕುರಿತಂತೆ ಸಮಾಲೋಚನೆ ಸಭೆಗಳನ್ನು ಆಯೋಜನೆ ಮಾಡಲಾಗಿರುತ್ತದೆ. 21 ರಿಂದ 45 ವರ್ಷ ವಯಸ್ಸಿನವರನ್ನು ಸಭೆಗೆ ಆಹ್ವಾನಿಸಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ ಕಾರ್ಯಕ್ರಮದ ಆಶಯವನ್ನು ತಿಳಿದು ಘಟಕಕ್ಕೆ ಸೇರ್ಪಡೆಗೊಳ್ಳಲು ಆಸಕ್ತಿ ತೋರುವ ಸದಸ್ಯರನ್ನು ವಿಪತ್ತು ನಿರ್ವಹಣಾ ಘಟಕಕ್ಕೆ ಆಯ್ಕೆ ಮಾಡಲಾಗಿದೆ. ಈಜು ತಜ್ಞರು, ಉರಗ ತಜ್ಞರು, ಮರಏರುವ ತಜ್ಞರು, ಇಲೆಕ್ಟ್ರಿಶಿಯನ್‌ಗಳು, ಗಾರೆ ಕೆಲಸದ ಮೇಸ್ತ್ರಿಗಳು, ವಾಹನ ಚಾಲಕರು, ಕೃಷಿಕರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಜ್ಞತೆ ಹೊಂದಿರುವವರನ್ನು ಸ್ವಯಂಸೇವಕರನ್ನಾಗಿ ಗುರುತಿಸಲಾಗಿದೆ. ರಾಜ್ಯದಲ್ಲಿ ಇದುವರೆಗೆ 520 ಸಮಾಲೋಚನೆ ಸಭೆಗಳನ್ನು ನಡೆಸಲಾಗಿದೆ. ಹತ್ತು ಸಾವಿರಕ್ಕೂ ಅಧಿಕ ಮಂದಿ ಸಮಾಲೋಚನೆ ಸಭೆಯಲ್ಲಿ ಭಾಗವಹಿಸಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ.



## ಸ್ವಯಂಸೇವಕರ ತರಬೇತಿ

ವಿಪತ್ತು ನಿರ್ವಹಣೆಯ ಪ್ರತಿ ತಾಲ್ಲೂಕು ಘಟಕಕ್ಕೆ 200 ಸದಸ್ಯರನ್ನು ನೋಂದಾವಣೆ ಮಾಡಲಾಗುವುದು. ಮೊದಲ ಹಂತದಲ್ಲಿ 100 ಸ್ವಯಂಸೇವಕರನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಈ ಸ್ವಯಂಸೇವಕರಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (ಎನ್.ಡಿ.ಆರ್.ಎಫ್), ಅಗ್ನಿಶಾಮಕದಳ ನೆರವಿನಿಂದ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ, ಗೃಹರಕ್ಷಕದಳ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಕೃಷಿ, ಪಶುಸಂಗೋಪನೆ, ಮೀನುಗಾರಿಕೆ ಮುಂತಾದ ಇಲಾಖೆಗಳ ಸಹಯೋಗದಲ್ಲಿ ತರಬೇತಿ ನಡೆಸಲಾಗುವುದು. ತರಬೇತಿಯು ಒಂದು ದಿನ ಅವಧಿಯದ್ದಾಗಿದ್ದು ವಿಷಯಾಧಾರಿತವಾಗಿರುತ್ತದೆ. ತರಬೇತಿಯಲ್ಲಿ ಪ್ರಾತ್ಯಕ್ಷಿಕೆ (Mock Drill Exercise) ಮೂಲಕ ಕಲಿಯಲು ಅವಕಾಶ ನೀಡಿದ್ದು ಯಾವುದೇ ಬಗೆಯ ವಿಪತ್ತು ಸಂಭವಿಸಿದರೂ ಕಾರ್ಯಾಚರಣೆ ನಡೆಸಬಲ್ಲ ತಜ್ಞತೆಯನ್ನು ರೂಢಿಸಿಕೊಳ್ಳಲು ಅನುಕೂಲವಾಗಿರುತ್ತದೆ.



## ವಿಪತ್ತು ನಿರ್ವಹಣೆಗೆ ಅಗತ್ಯ ಪರಿಕರಗಳನ್ನು ಘಟಕಕ್ಕೆ ವಿತರಣೆ

ವಿಪತ್ತು ನಿರ್ವಹಣಾ ಘಟಕಕ್ಕೆ ಕಾರ್ಯಾಚರಣೆಗೆ ಅಗತ್ಯವಿರುವ ವಿಪತ್ತು ಕಾರ್ಯಾಚರಣೆಗೆ ಉಪಕರಣಗಳನ್ನು ವಿಪತ್ತು ನಿರ್ವಹಣಾ ಘಟಕಕ್ಕೆ ನೀಡಲಾಗಿದೆ. ಲೈಫ್ ಜಾಕೆಟ್, ಲೈಫ್ ಬಾಯ್, ಅಪ್ರಾನ್ಸ್, ಲ್ಯಾಡರ್, ಸ್ಟ್ರೆಚರ್, ಫೈರ್ ಎಕ್ಸಟಿಂಗ್ವಿಶರ್, ಸೇಫ್ಟಿ ಹೆಲ್ಮೆಟ್, ಚೈನ್ ಸಾ, ಫಸ್ಟ್‌ಏಡ್ ಕಿಟ್ ಸೇರಿದಂತೆ 34 ಬಗೆಯ ಉಪಕರಣಗಳನ್ನು ನೀಡಲಾಗಿದೆ. ಪ್ರವಾಹ, ಭೂಕಂಪ, ಚಂಡಮಾರುತ ಮತ್ತಿತರ ವಿಪತ್ತಿನ ಸಂದರ್ಭ ಈ ಉಪಕರಣಗಳನ್ನು ಕಾರ್ಯಾಚರಣೆಗಾಗಿ ಸ್ವಯಂಸೇವಕರು ಬಳಸಿಕೊಳ್ಳುತ್ತಿದ್ದಾರೆ. ಉಪಕರಣಗಳನ್ನು ತಾಲ್ಲೂಕು ವ್ಯಾಪ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರದಲ್ಲಿ ಸಂಗ್ರಹಿಸಿ ಇಡಲಾಗಿದ್ದು ಸ್ವಯಂಸೇವಕರಿಗೆ ಕ್ಲಪ್ತ ಸಮಯಕ್ಕೆ ಸಿಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ.

## ಸಮವಸ್ತ್ರ ಮತ್ತು ಪ್ರಮಾಣ ಪತ್ರ ವಿತರಣೆ

ಎನ್.ಡಿ.ಆರ್.ಎಫ್ ಮೂಲಕ ತರಬೇತಿಯನ್ನು ಪೂರೈಸಿದ ವಿಪತ್ತು ಸೇವಾ ಸಮಿತಿಯ ಸ್ವಯಂಸೇವಕರಿಗೆ ಪ್ರಮಾಣಪತ್ರವನ್ನು ನೀಡಲಾಗಿದೆ. ಅಲ್ಲದೇ ಎಲ್ಲಾ ಸ್ವಯಂಸೇವಕರಿಗೆ ಸಮವಸ್ತ್ರ ವಿತರಣೆ ಮಾಡಲಾಗಿದೆ. ಸಮವಸ್ತ್ರವಾಗಿ ಒಂದು ಟೀ ಶರ್ಟ್ ಹಾಗೂ ಒಂದು ಪ್ಯಾಂಟ್ ನೀಡಲಾಗಿದೆ. ಎರಡನೇ ಹಂತದಲ್ಲಿ ಇನ್ನೊಂದು ಜೊತೆ ಸಮವಸ್ತ್ರ ನೀಡುವ ಉದ್ದೇಶ ಹೊಂದಲಾಗಿದೆ. ಸ್ವಯಂಸೇವಕರು ವಿಪತ್ತು ಸೇವೆ ಹಾಗೂ ಸಾಮಾಜಿಕ ಸೇವೆ ಚಟುವಟಿಕೆಗಳಲ್ಲಿ ಸಮವಸ್ತ್ರವನ್ನು ಧರಿಸುತ್ತಿದ್ದು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.



## ವಾಟ್ಸಾಪ್ ಗುಂಪುಗಳ ಮೂಲಕ ಅನುಪಾಲನೆ

ವಿಪತ್ತು ನಿರ್ವಹಣೆ ಸ್ವಯಂಸೇವಕರ ಜೊತೆ ಜನಜಾಗೃತಿ ಪ್ರಾದೇಶಿಕ ಕಚೇರಿ ಹಾಗೂ ಪ್ರಾದೇಶಿಕ ಯೋಜನಾಧಿಕಾರಿಗಳು ನಿರಂತರ ಸಂಪರ್ಕ ಹೊಂದಿರುತ್ತಾರೆ. ಸ್ವಯಂಸೇವಕರು ನಿರ್ವಹಿಸುವ ಸೇವಾಕಾರ್ಯಗಳನ್ನು ಬ್ಲಾಗ್ ಮೂಲಕ ದಾಖಲಿಸುವ ಕೆಲಸ ಮಾಡಲಾಗುತ್ತಿದೆ. ತಯಾರಿಸಿದ ಯಶೋಗಾಥೆಗಳನ್ನು ವಾಟ್ಸಾಪ್ ಗುಂಪುಗಳಲ್ಲಿ ಹಂಚಿಕೊಂಡು ಎಲ್ಲಾ ತಾಲ್ಲೂಕು ಘಟಕಗಳು ಪ್ರೇರಣೆ ಹೊಂದಿ ನಿರಂತರವಾಗಿ ಸೇವಾ ಚಟುವಟಿಕೆಗಳನ್ನು ನಡೆಸುತ್ತಿವೆ. ಶ್ರೀ ಧರ್ಮಸ್ಥಳ ಜನಜಾಗೃತಿ ಮತ್ತು ಡಿಸಾಸ್ಟರ್ ಮ್ಯಾನೇಜ್ ಮೆಂಟ್‌ಎನ್ನುವ ಫೇಸ್ ಬುಕ್ ಪೇಜ್ ಹೊಂದಿದ್ದು ಈ ಮೂಲಕ ಸೇವಾಕಾರ್ಯಗಳನ್ನು ಸಮುದಾಯಕ್ಕೆ ಪ್ರಚಾರಪಡಿಸುವ ಕಾರ್ಯ ಮಾಡಲಾಗುತ್ತಿದೆ. ಸಂಯೋಜಕರು ತಮ್ಮತಮ್ಮ ಘಟಕಗಳ ಕಾರ್ಯ ಚಟುವಟಿಕೆಗಳನ್ನು ದಾಖಲಿಸುವಂತೆ ಪ್ರೇರಣೆ ನೀಡಿದ್ದು ಕೇಂದ್ರಕಚೇರಿ ಹಾಗೂ ಜನಜಾಗೃತಿ ಪ್ರಾದೇಶಿಕ ಕಚೇರಿಗಳಿಂದ ದಾಖಲಾತಿಗಳ ಸಮರ್ಪಕ ನಿರ್ವಹಣೆ ಮಾಡಲಾಗುತ್ತಿದೆ.

ವಿಪತ್ತು ನಿರ್ವಹಣೆ ಸಂಯೋಜಕರ ಆಯ್ಕೆ.

↓

ವಿಪತ್ತು ನಿರ್ವಹಣೆ ಸ್ವಯಂಸೇವಕರ ಆಯ್ಕೆ

↓

ಕ್ಷಿಪ್ರ ಸ್ಪಂದನಾ ತಂಡ ರಚನೆ.

↓

ಮಾಸ್ಟರ್ ಮತ್ತು ಕ್ಯಾಪ್ಟನ್ ಆಯ್ಕೆ.

↓

ರಾಜ್ಯಮಟ್ಟದ ವಿಪತ್ತು ನಿರ್ವಹಣೆ ವೇದಿಕೆ ರಚನೆ.

## ಆಡಳಿತ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಿ) ಧರ್ಮಸ್ಥಳದಿಂದ ನಡೆಸಲ್ಪಡುವ ವಿಪತ್ತು ನಿರ್ವಹಣೆ ಕಾರ್ಯಕ್ರಮ ಜನಜಾಗೃತಿ ಪ್ರಾದೇಶಿಕ ಕಚೇರಿ, ಬೆಳ್ತಂಗಡಿ ಮೂಲಕ ಅನುಷ್ಠಾನಗೊಳ್ಳುತ್ತಿದೆ.

## ಕಾರ್ಯಕ್ರಮಗಳು

1. ಸಂಯೋಜಕರ ತರಬೇತಿ
2. ಸ್ವಯಂಸೇವಕರ ತರಬೇತಿ
3. ಕ್ಷಿಪ್ರ ಸ್ಪಂದನಾ ತಂಡದ ತರಬೇತಿ
4. ಮಾಸ್ಟರ್ ಮತ್ತು ಕ್ಯಾಪ್ಟನ್ ತರಬೇತಿಗಳು
5. ಪುನಃಶ್ಚೇತನ ತರಬೇತಿಗಳು
6. ವಿಪತ್ತು ಸೇವಾ ಚಟುವಟಿಕೆಗಳು
7. ಸಾಮಾಜಿಕ ಸೇವಾ ಚಟುವಟಿಕೆಗಳು

## ಸಹಭಾಗಿತ್ವ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಂಗಸಂಸ್ಥೆಗಳ ಪೈಕಿ ಜನಜಾಗೃತಿ ವೇದಿಕೆ, ನವಜೀವನ ಸಮಿತಿ, ಸ್ವಚ್ಛತಾ ಸೇನಾನಿಗಳು, ಪ್ರಗತಿಬಂಧು ಒಕ್ಕೂಟಗಳು, ಜ್ಞಾನವಿಕಾಸ ಕೇಂದ್ರಗಳು, ಪ್ರಗತಿಬಂಧು ಸ್ವ-ಸಹಾಯ ಸಂಘಗಳು, ಜಂಟಿಬಾಧ್ಯತಾ ಗುಂಪುಗಳು, ಆಸಕ್ತ ಕಾರ್ಯಕರ್ತರು, ಸಾರ್ವಜನಿಕರು, ವಿಪತ್ತು ನಿರ್ವಹಣೆ ತಜ್ಞರು, ಸ್ವಯಂಸೇವಾ ಸಂಘಟನೆಗಳ ಕಾರ್ಯಕರ್ತರು ಮುಂತಾದವರನ್ನು ತೊಡಗಿಸಿಕೊಂಡು "ಶೌರ್ಯ" ವಿಪತ್ತು ಸೇವಾ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಕಾರ್ಯಕ್ರಮವು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರ (National Disaster Management Authority-NDMA), ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (State Disaster Management Authority-SDMA), 'ಜಿಲ್ಲಾ ವಿಪತ್ತು ನಿರ್ವಹಣೆ ಪ್ರಾಧಿಕಾರ' (District Disaster Management Authority), 'ತಾಲೂಕು ವಿಪತ್ತು ನಿರ್ವಹಣೆ ಸಮಿತಿ' (Tehsil Level Disaster Management Committee) ಹಾಗೂ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ರಚಿಸಲ್ಪಟ್ಟ ಇತರ ವಿಪತ್ತು ನಿರ್ವಹಣೆ ಸಮಿತಿಗಳ ಸಮನ್ವಯದಲ್ಲಿ ಕಾರ್ಯನಿರ್ವಹಿಸುತ್ತಿದೆ.

## ಸಂಯೋಜಕರ ಸಭೆಗಳು



ವಿಪತ್ತು ನಿರ್ವಹಣೆ ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕಾಗಿ ಸೇವಾ ಮನೋಭಾವನೆ ಹೊಂದಿರುವ, ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಮುದಾಯದ ಏಳ್ಗೆಗೆ ಶ್ರಮಿಸುವ ಬಗ್ಗೆ ಕಳಕಳಿ ಹೊಂದಿರುವವರನ್ನು ವಿಪತ್ತು ನಿರ್ವಹಣಾ ಸಂಯೋಜಕರನ್ನಾಗಿ ಆಯ್ಕೆ ಮಾಡಲಾಗಿದೆ. ಯೋಜನೆಯಲ್ಲಿ ತರಬೇತಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರು, ತಾಲ್ಲೂಕು ವ್ಯಾಪ್ತಿಯಲ್ಲಿ ವಿಪತ್ತು ಸೇವೆ ಹಾಗೂ ಸಾಮಾಜಿಕ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವವರನ್ನು ಸಂಯೋಜಕರನ್ನಾಗಿ ಆಯ್ಕೆ ಮಾಡಲಾಗಿದೆ. ರಾಜ್ಯದಲ್ಲಿ ಒಟ್ಟು 270 ಸಂಯೋಜಕರು ಸೇವೆ ಸಲ್ಲಿಸುತ್ತಿದ್ದಾರೆ. ಕಾಲಕಾಲಕ್ಕೆ ತರಬೇತಿಗಳನ್ನು ನೀಡಿ ಸಂಯೋಜಕರ ವ್ಯಾಪ್ತಿಯಲ್ಲಿ ಬರುವ ಘಟಕಗಳ ಬಲವರ್ಧನೆಗೆ ಯೋಜನೆ ರೂಪಿಸಲಾಗುತ್ತಿದೆ.

## ಮಾಸಿಕ ಸಭೆಗಳು

ವಿಪತ್ತು ಸ್ಪಂದನಾ ಸ್ವಯಂಸೇವಕರ ತಾಲ್ಲೂಕು ಘಟಕಗಳು ಯಾವತ್ತು ಕ್ರಿಯಾಶೀಲವಾಗಿರಬೇಕು ಎನ್ನುವ ಉದ್ದೇಶದಿಂದ ಸ್ವಯಂಸೇವಕರಿಗೆ ಮಾಸಿಕ/ತ್ರೈಮಾಸಿಕ ಸಭೆಗಳನ್ನು ಮತ್ತು ಶ್ರಮದಾನಗಳನ್ನು ನಡೆಸಲಾಗುತ್ತಿದೆ. ಮಾಸಿಕ ಸಭೆಯನ್ನು ಪೊಲೀಸ್ ಇಲಾಖೆ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮುಂತಾದ ಇಲಾಖೆಗಳ ಸಹಯೋಗದೊಂದಿಗೆ ನಡೆಸಲಾಗುತ್ತಿದೆ. ಪ್ರಾತ್ಯಕ್ಷಿಕೆಗಳನ್ನು (Mock Drill Exercise) ಏರ್ಪಡಿಸಿ ವಿಪತ್ತು ಸೇವಾ ಚಟುವಟಿಕೆಗಳಲ್ಲಿ ಪರಿಣತಿ ಹೊಂದುವಂತೆ ಮಾಡಲಾಗಿದೆ. ಮಾಜಿ ಸೈನಿಕರು, ನಿವೃತ್ತಆರಕ್ಷಕರು, ವೈದ್ಯಕೀಯ ಮುಖ್ಯಸ್ಥರು, ಸಾಮಾಜಿಕರಂಗದ ಪ್ರಮುಖರು ಮುಂತಾದವರ ಭಾಗವಹಿಸುವಿಕೆಯಲ್ಲಿ ಕಾರ್ಯಾಗಾರ ಏರ್ಪಡಿಸಿದ್ದು ಸ್ವಯಂಸೇವಕರ ಪುನಶ್ಚೇತನಕಾರ್ಯ ಕೈಗೊಳ್ಳಲಾಗಿದೆ. ಗಿಡ ನಾಟಿ, ಅಣೆಕಟ್ಟುಗಳ ಸ್ವಚ್ಛತೆ, ಬಡ ಕುಟುಂಬಗಳ ಮನೆ ನಿರ್ಮಾಣದಂತಹ ಶ್ರಮದಾನವನ್ನು ಮಾಸಿಕ ಶ್ರಮದಾನ ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ.



| ಕ್ರ.ಸಂ | ನಿರ್ವಹಿಸಿದ ಸಾಮಾಜಿಕ ಸೇವಾ ಕಾರ್ಯಗಳು | |
|---|---|---|
| 1 | ಸ್ವಚ್ಛತಾ ಕಾರ್ಯಕ್ರಮಗಳು | 977 |
| 2 | ರಸ್ತೆಯ ಇಕ್ಕೆಲಗಳಲ್ಲಿ ಬೆಳೆದ ಪೊದೆಗಳ ಸ್ವಚ್ಛತೆ | 76 |
| 3 | ಮರಣ ಹೊಂದಿದ ಪ್ರಾಣಿಗಳ ದಫನಕಾರ್ಯ | 30 |
| 4 | ರಸ್ತೆ ರಿಪೇರಿ | 122 |
| 5 | ಗಿಡನಾಟಿ ಕಾರ್ಯಕ್ರಮಗಳು | 29 |
| 6 | ರಾಷ್ಟ್ರೀಯ ದಿನಾಚರಣೆಗಳ ಆಚರಣೆ | 235 |
| 7 | ವಿಪತ್ತು ನಿರ್ವಹಣೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ | 97 |
| 8 | ಬಡಕುಟುಂಬಕ್ಕೆ ಶೌಚಾಲಯ ರಚನೆ ಮಾಡಿರುವುದು | 2 |
| 9 | ಆರೋಗ್ಯ ತಪಾಸಣೆ ಕಾರ್ಯಕ್ರಮ | 39 |
| 10 | ಅನಾರೋಗ್ಯ ಪೀಡಿತ ಕುಟುಂಬಗಳ ಭೇಟಿ | 194 |
| 11 | ಕಾಡು ಪ್ರಾಣಿಗಳಿಂದ ಹಾನಿಗೆ ಒಳಗಾದ ರೈತರಿಗೆ ಸಾಂತ್ವಾನ | 13 |
| 12 | ಸರ್ಕಾರಿ ಇಲಾಖೆಯ ಸೌಲಭ್ಯ ಒದಗಿಸಿರುವುದು | 39 |
| 13 | ಶಾಲೆಯ ಹಾರಿಹೋದ ಹಂಚು ಸರಿಪಡಿಸಿರುವುದು | 8 |
| 14 | ತೆರೆದ ಬಾವಿಗೆ ರಕ್ಷಣಾಗೋಡೆ ರಚನೆ | 2 |
| 15 | ಗೋವುಗಳನ್ನು ಗೋಶಾಲೆಗೆ ಸೇರಿಸಿರುವುದು | 2 |
| 16 | ಸ್ವಯಂಸೇವಕರ ಇಲಾಖೆ ಭೇಟಿ | 107 |
| 17 | ಆಧಾರ್‌ಕಾರ್ಡ ಮಾಡಿಸಿಕೊಟ್ಟಿರುವುದು | 6 |
| 18 | ಬಡಕುಟುಂಬದ ವಿದ್ಯಾರ್ಥಿಗೆ ಶಿಕ್ಷಣದ ನೆರವು | 1 |
| 19 | ಕೊರೋನಾ ಟಾಸ್ಕ್ ಫೋರ್ಸ್ ಸಭೆಯಲ್ಲಿ ಭಾಗಿ | 5 |
| | | 1984 |

## ವಿಪತ್ತು ಸೇವಾ ಚಟುವಟಿಕೆಗಳು

"ಶೌರ್ಯ" ತಂಡದ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ವಿಪತ್ತು ಘಟಿಸಿದ ಸಂದರ್ಭದಲ್ಲಿ ತತ್‌ಕ್ಷಣ ಸ್ಪಂದಿಸುವ ಕಾರ್ಯ ಮಾಡುತ್ತಿದ್ದಾರೆ. ಆರೋಗ್ಯ ತಪ್ಪಿದವರಿಗೆ ಪ್ರಾಥಮಿಕ ಚಿಕಿತ್ಸೆ ನೀಡುವುದು, ವಾಹನ ಅಪಘಾತಗಳಾದ ಸಂದರ್ಭಕ್ಷಿಪ್ರ ನೆರವಿಗೆ ಧಾವಿಸಿ ತೊಂದರೆಯಲ್ಲಿರುವವರಿಗೆ ಆಸ್ಪತ್ರೆಗೆ ಕರೆದೊಯ್ಯುವುದು. ಅಪಾಯದಲ್ಲಿ ಸಿಲುಕಿರುವ ಪ್ರಾಣಿ, ಪಕ್ಷಿಗಳಿಗೆ ಸಹಾಯ ಮಾಡುವುದು, ಪ್ರವಾಹದ ಸಮಯದಲ್ಲಿ ತೊಂದರೆಗೆ ಒಳಗಾದ ಸ್ಥಳಕ್ಕೆ ಧಾವಿಸಿ ನೆರವಿಗೆ ನಿಲ್ಲುವುದು, ಬೆಂಕಿ ಅವಘಡಗಳ ಸಂದರ್ಭ ನಂದಿಸಲು ಸಹಾಯ ಮಾಡುವುದು, ಕಟ್ಟಡ ಕುಸಿತದ ಸಮಯ ಕಾರ್ಯಾಚರಣೆ ಹೀಗೆ ಸದಾ ವಿಪತ್ತು ನಿರ್ವಹಣೆಯ ಚಟುವಟಿಕೆಗಳಲ್ಲಿ ತಾಲ್ಲೂಕು ಸಮಿತಿ ತೊಡಗಿಕೊಂಡಿರುತ್ತದೆ.

| ಕ್ರ.ಸಂ | ನಿರ್ವಹಿಸಿದ ವಿಪತ್ತು ಸೇವಾ ಚಟುವಟಿಕೆಗಳು | |
|---|---|---|
| 1 | ಬೆಂಕಿ ಅನಾಹುತ ಕಾರ್ಯಾಚರಣೆ | 36 |
| 2 | ಮೃತದೇಹವನ್ನು ನದಿ/ಬಾವಿಯಿಂದ ಮೇಲಕ್ಕೆ ಎತ್ತಿರುವುದು | 10 |
| 3 | ರಕ್ತದಾನ ಮಾಡಿರುವುದು | 168 |
| 4 | ಕಿಂಡಿ ಅಣೆಕಟ್ಟಿನಿಂದ ಮರದ ದಿಮ್ಮಿಗಳ ತೆರವು | 51 |
| 5 | ಹಾವು ಹಿಡಿದು ಕಾಡಿಗೆ ಬಿಟ್ಟಿರುವುದು | 126 |
| 6 | ರಸ್ತೆ ಅಪಘಾತಕ್ಕೆ ಸ್ಪಂದನೆ | 167 |
| 7 | ಅಪಘಾತಕ್ಕೀಡಾದ ಪ್ರಾಣಿಗಳಿಗೆ ಸ್ಪಂದನೆ/ ಚಿಕಿತ್ಸೆ | 54 |
| 8 | ಪ್ರಾಥಮಿಕ ಚಿಕಿತ್ಸೆ ನೀಡಿರುವುದು | 25 |
| 9 | ಅನಾರೋಗ್ಯ ಪೀಡಿತ ವ್ಯಕ್ತಿಗಳನ್ನು ಆಸ್ಪತ್ರೆಗೆ ಸೇರಿಸಿರುವುದು | 39 |
| 10 | ಕುಸಿದು ಬಿದ್ದ ಮನೆಯ ರಿಪೇರಿಗೆ ಸಹಾಯ ಮಾಡಿರುವುದು | 36 |
| 11 | ಮನೆ ಕುಸಿದ ಕುಟುಂಬಕ್ಕೆ ಸ್ವಚ್ಛತೆಗೆ ಸಹಾಯ ಮಾಡಿರುವುದು | 18 |
| 12 | ಮಳೆಯಿಂದ ಹಾನಿಯಾದ ಮನೆ ಸ್ಥಳಾಂತರ | 14 |
| 13 | ರಸ್ತೆಯ ಮೇಲೆ ಬಿದ್ದ ಮರತೆರವು | 26 |
| 14 | ವಿದ್ಯುತ್‌ತಂತಿಯ ಮೇಲೆ ಬಿದ್ದ ಮರತೆರವು | 25 |
| 15 | ನಾಪತ್ತೆಯಾದ ವ್ಯಕ್ತಿಗಳ ಶೋಧನಾಕಾರ್ಯ | 2 |
| 16 | ಕಾಲುವೆಗಳ ದುರಸ್ತಿ | 26 |
| | ಒಟ್ಟು | 823 |

## ವಿಪತ್ತುವಾರು ತಜ್ಞರನ್ನು ರೂಪಿಸುವುದು

ವರ್ಷದಾದ್ಯಂತ ಆಗಾಗ ಸಂಭವಿಸುವ ಕೆಲವು ವಿಪತ್ತುಗಳಿವೆ. ರಸ್ತೆ ಅಪಘಾತ, ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸುವುದು, ವಾಸದ ಮನೆಗೆ ಅಗ್ನಿತಗಲುವುದು, ಅಂಗಡಿ, ಗೋದಾಮು, ವಸತಿ ಸಂಕೀರ್ಣಗಳು, ಬಹುಮಹಡಿ ಕಟ್ಟಡಗಳು ಮುಂತಾದ ಸ್ಥಳಗಳಲ್ಲಿ ಬೆಂಕಿ ಅನಾಹುತ, ಕಾಡ್ಗಿಚ್ಚು, ನೀರಿನ ಮೂಲಗಳಲ್ಲಿ ಕಾಲು ಜಾರಿ ಬೀಳುವುದು, ಹಾವು ಕಡಿತ ಇತ್ಯಾದಿ ದುರ್ಘಟನೆಗಳು ಆಗಾಗ ಸಂಭವಿಸುತ್ತಲೇ ಇರುತ್ತವೆ. ಕೆಲವೊಮ್ಮೆ ಆಕಸ್ಮಿಕವಾಗಿ ಹಲವು ಬಾರಿ ಮನುಷ್ಯರ ನಿರ್ಲಕ್ಷ್ಯದಿಂದಲೇ ಜರಗುವ ಇವುಗಳು ತುಂಬಾ ಅಪಾಯಕಾರಿ. ಜೀವಹಾನಿಯನ್ನೂ ಉಂಟು ಮಾಡಬಹುದು. ವಿಪರೀತ ಆರ್ಥಿಕ ಸಂಕಷ್ಟಕ್ಕೆ ನೂಕಿ ಬಿಡಬಹುದು.



ಇಂತಹ ಆಪತ್ತು ಎದುರಾದಾಗ ಆ ಸ್ಥಳದಲ್ಲಿ ಕ್ಷಿಪ್ರ ನೆರವಿಗೆ ಧಾವಿಸುವ ಮಂದಿ ಇಲ್ಲದೇ ಇರುವುದರಿಂದ ಸಣ್ಣ ಅವಘಡವೂ ದೊಡ್ಡ ಆಘಾತವುಂಟುಮಾಡಬಲ್ಲದು. ತಾಲೂಕು ವ್ಯಾಪ್ತಿಯಲ್ಲಿ ಇಂತಹ ಯಾವುದೇ ದುರ್ಘಟನೆಗಳು ಜರುಗಿದರೂ ಅವುಗಳಿಗೆ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ, ಆಯಾ ವಿಪತ್ತಿಗೆ ಅನುಗುಣವಾಗಿ ತಜ್ಞತೆಯನ್ನು ಹೊಂದಿರುವ ಸ್ವಯಂ ಸೇವಕರನ್ನು "ಶೌರ್ಯ" ಸಮಿತಿಗೆ ಸೇರ್ಪಡೆಗೊಳಿಸಲಾಗಿದೆ. ವಿಶೇಷ ಕೌಶಲ ಹೊಂದಿರುವ ಸ್ವಯಂಸೇವಕರ ವಿವರ ಈ ಕೆಳಗಿನಂತಿದೆ.

1. ಈಜು ತಜ್ಞರ ತಂಡ – 200 ಜನ.
2. ದೋಣಿ ಚಾಲಕರ ತಂಡ – 30 ಜನ.
3. ಗಾರೆ ಕೆಲಸದವರು: 356
4. ಮರ ಏರುವ ತಜ್ಞರು: 160
5. ಟೈಲರ್ ವೃತ್ತಿಯವರು: 06
6. ಮೆಕ್ಯಾನಿಕ್ ತಜ್ಞರು: 34
7. ವಾಹನ ಚಾಲಕರು: 380
8. ವೆಲ್ಡಿಂಗ್ ವೃತ್ತಿಯವರು: 18
9. ಭಾಷಣಕಾರರು– 180 ಜನ.
10. ಮುಳುಗು ತಜ್ಞರು: 04
11. ಬೆಂಕಿ ಅವಘಡ ನಿರ್ವಹಣೆ ತಜ್ಞರು– 300
12. ರಸ್ತೆ ಅಪಘಾತ ತಜ್ಞರು– 300 ಜನ.
13. ಪ್ರಥಮ ಚಿಕಿತ್ಸೆ ತಜ್ಞರು– 30 ಜನ.
14. ಇಲೆಕ್ಟ್ರಿಶಿಯನ್ : 280 ಜನ
15. ಪೈಂಟರ್ : 46







## ಸಹಕಾರ

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪರಮಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ತಮ್ಮ ಅಮೂಲ್ಯ ಸಮಯವನ್ನು ವಿಪತ್ತು ನಿರ್ವಹಣೆ ಕಾರ್ಯಕ್ರಮಕ್ಕೆ ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುನ್ನಡೆಸುವಲ್ಲಿ ಪ್ರೇರಣಾ ಶಕ್ತಿಯಾಗಿರುತ್ತಾರೆ. ಜೊತೆಗೆ ಹೆಗ್ಗಡೆಯವರ ಧರ್ಮಪತ್ನಿ ಹೇಮಾವತಿ ಅಮ್ಮನವರ ಕಳಕಳಿ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ಜಗದೀಶ್ ಶೆಟ್ಟರ್ ಅವರು ಉತ್ತರಕರ್ನಾಟಕ ಭಾಗದಲ್ಲಿ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅಮೂಲ್ಯ ಸಲಹೆಗಳನ್ನು ನೀಡಿರುತ್ತಾರೆ. ಕರ್ನಾಟಕ ಸರಕಾರದ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತರಾದ ಶ್ರೀ ಮನೋಜ್‌ರಾಜನ್, ಕಾರ್ಯದರ್ಶಿಯವರಾದ ಅಂಜುಮನ್ ಪರ್ವಿನ್, ಉಪ ಕಾರ್ಯದರ್ಶಿ ಕೆ.ಸಿ.ಕುಮಾರ್, ಅಧೀನ ಕಾರ್ಯದರ್ಶಿ ರಶ್ಮೀ ಎಮ್, ಶಾಖಾಧಿಕಾರಿ ಅರುಣ್‌ಕುಮಾರ್ ಎಸ್. ವಿಪತ್ತು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನದಲ್ಲಿ ವಿಶೇಷ ಮಾರ್ಗದರ್ಶನ ನೀಡಿರುತ್ತಾರೆ.

ದಕ್ಷಿಣಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರಾದ ಡಾ. ರಾಜೇಂದ್ರ ಕೆ.ವಿ, ಮತ್ತು ಸಿಂಧೂ ಬಿ. ರೂಪೇಶ್, ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಯವರಾದ ನಿತೀಶ್ ಕೆ. ಪಾಟೀಲ್, ಉತ್ತರಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರಾದ ಡಾ. ಹರೀಶ್‌ಕುಮಾರ್, ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿ ಶ್ರೀ ಎಮ್.ಜಿ. ಹಿರೇಮಠ, ಕೊಡಗು ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಚಿಕ್ಕಮಗಳೂರು ಜಿಲ್ಲಾಧಿಕಾರಿ ಡಾ. ಬಗಡಿ ಗೌತಮ್, ಹಾಸನ ಜಿಲ್ಲಾಧಿಕಾರಿ ಪ್ರಿಯಾಂಕಾ ಮೇರಿ ಅವರು ವಿಶೇಷ ಸಹಕಾರ ನೀಡಿರುತ್ತಾರೆ. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು, ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು, ಜನಪ್ರತಿನಿಧಿಗಳು ವಿಶೇಷವಾಗಿ ಸಹಕಾರ ನೀಡಿದ್ದು ಇವರೆಲ್ಲರ ಸಹಕಾರವನ್ನು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತೇವೆ.

## ಪ್ರಗತಿಯ ಪಕ್ಷಿನೋಟ

- ಸಂಯೋಜಕರ ತರಬೇತಿ : 38
- ರಚಿಸಿದ ವಿಪತ್ತು ನಿರ್ವಹಣಾ ತಂಡ : 18
- ಸಂಯೋಜಕರ ಆಯ್ಕೆಯ ಸಮಾಲೋಚನೆ ಸಭೆ : 96
- ಸ್ವಯಂಸೇವಕರ ಆಯ್ಕೆಯ ಸಮಾಲೋಚನೆ ಸಭೆ : 520
- ಸಂಯೋಜಕರ ಸಂಖ್ಯೆ : 270
- ಸ್ವಯಂಸೇವಕರ ಸಂಖ್ಯೆ : 2260
- ಸದಸ್ಯತ್ವ ಪಡೆದ ಒಟ್ಟು ಸದಸ್ಯರ ಸಂಖ್ಯೆ : 2530
- ಸ್ವಯಂಸೇವಕರ ತರಬೇತಿ : 18
- ಸೇವಾಕಾರ್ಯಗಳ ಆಯೋಜನೆ : 1979
- ವಿಪತ್ತು ಕಾರ್ಯಾಚರಣೆಗಳು : 823
- ಒಟ್ಟು ಚಟುವಟಿಕೆಗಳು : 2,802
- ಒಟ್ಟು ವಿನಿಯೋಗಿಸಿದ ಮಾನವ ದಿನಗಳು : 14,010

## ಅಂಕಗಳ ಮತ್ತು ವರದಿ ಕ್ರೋಡೀಕರಣ

ತಾಲ್ಲೂಕು ಘಟಕಗಳು ನಿರ್ವಹಿಸಿದ ವಿಪತ್ತು ಸೇವೆ ಮತ್ತು ಸಾಮಾಜಿಕ ಸೇವಾ ಕಾರ್ಯಗಳಿಗೆ ಅಂಕಗಳನ್ನು ನೀಡಿ ಗುರುತಿಸುವ ಕೆಲಸ ಮಾಡಲಾಗುತ್ತಿದೆ. ವಿಪತ್ತು ಸೇವಾ ಚಟುವಟಿಕೆಗಳಿಗೆ 20 ಅಂಕ ಮತ್ತು ಸಾಮಾಜಿಕ ಸೇವಾ ಚಟುವಟಿಕೆಗಳಿಗೆ 15 ಅಂಕಗಳನ್ನು ನಿಗದಿಪಡಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಘಟಕಗಳನ್ನು ಗುರುತಿಸಿ ಸ್ವಯಂಸೇವಕರನ್ನು ಗೌರವಿಸುವ ಕೆಲಸ ಇದರಿಂದ ಸಾಧ್ಯವಾಗುತ್ತಿದೆ. ಅಂಕಗಳ ಕುರಿತಂತೆ ಸ್ವಮೌಲ್ಯಮಾಪನ ವರದಿಯನ್ನು ಸಂಯೋಜಕರ ಮೂಲಕ ತಯಾರಿಸಲಾಗುತ್ತಿದೆ. ಈ ಮಾದರಿ ಅನುಷ್ಠಾನದಿಂದ ಘಟಕಗಳ ನಡುವೆ ಸಕಾರಾತ್ಮಕ ಸ್ಪರ್ಧೆ ಏರ್ಪಟ್ಟಿದ್ದು ಸೇವಾ ಚಟುವಟಿಕೆಗಳು ಸಾಂಗವಾಗಿ ನೆರವೇರುತ್ತಿವೆ. ಸ್ವಯಂಸೇವಕರು ನಿರ್ವಹಿಸಿದ ಕಾರ್ಯಚಟುವಟಿಕೆಗಳನ್ನು ಬ್ಲಾಗ್ ಮೂಲಕ ಸಂಗ್ರಹಿಸಲಾಗಿದೆ. 2000ಕ್ಕೂ ಅಧಿಕ ಬ್ಲಾಗ್‌ಗಳನ್ನು ತಯಾರಿಸಿದ್ದು ಸೇವಾ ಚಟುವಟಿಕೆಗಳ ದಾಖಲಾತಿ ನಿರ್ವಹಣೆ ಇದರಿಂದ ಸಾಧ್ಯವಾಗಿದೆ.

## ಸ್ವಯಂಸೇವಕರ ಡೈರೆಕ್ಟರಿ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣಾ ಘಟಕಕ್ಕೆ ಸ್ವಯಂಸೇವಕರಾಗಿ ಆಯ್ಕೆಯಾದ ಸದಸ್ಯರ ವಿವರವನ್ನು ಸರ್ಕಾರದ ವಿವಿಧ ಇಲಾಖೆಗಳು, ಜಿಲ್ಲಾಧಿಕಾರಿಗಳ ಕಚೇರಿ, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಗಣ್ಯರಿಗೆ ನೀಡುವ ಉದ್ದೇಶದಿಂದ ಡೈರೆಕ್ಟರಿ ರಚಿಸಲಾಗುವುದು. ಅದರಲ್ಲಿ ಸ್ವ-ಯಂಸೇವಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಹೊಂದಿರುವ ವಿಶೇಷ ತಜ್ಞತೆ, ಸ್ವಯಂಸೇವಕರ ಭಾವಚಿತ್ರ ಮುಂತಾದ ವಿವರಗಳನ್ನು ಪ್ರಕಟಿಸಲಾಗುವುದು. ಜಿಲ್ಲೆ ಹಾಗೂ ತಾಲೂಕುವಾರು ಸಿಗುವ ಈ ಮಾಹಿತಿಯಿಂದಾಗಿ ಯಾವುದೇ ರೀತಿಯ ತೊಂದರೆಗೆ ಒಳಗಾದವರಿಗೆ ತಮ್ಮ ಹತ್ತಿರದ ವಿಪತ್ತು ಸ್ಪಂದನಾ ಸ್ವಯಂಸೇವಕರನ್ನು ಕೂಡಲೇ ಸಂಪರ್ಕಿಸಿ ಸಹಾಯ ಪಡೆಯಲು ಅನುಕೂಲವಾದಂತಾಗುತ್ತದೆ.

## ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ

ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಸಲಹೆ ಪಡೆಯಲು ಮತ್ತು ರಾಜ್ಯದಲ್ಲಿನ ಸೂಕ್ಷ್ಮ ಪ್ರದೇಶಗಳ ಕುರಿತು ಮಾಹಿತಿ ಪಡೆಯಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಬೆಂಗಳೂರು, ಎನ್.ಡಿ.ಆರ್.ಎಫ್ ಪಡೆ ಮಹದೇವಪುರ, ಬೆಂಗಳೂರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧೀಕಾರಗಳಾದ ದಕ್ಷಿಣಕನ್ನಡ, ಉತ್ತರಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ, ಧಾರವಾಡ, ಬೆಳಗಾವಿ, ಗದಗ ಇವುಗಳನ್ನು ಭೇಟಿ ಮಾಡಲಾಗಿದೆ. ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ವಿಪತ್ತು ನಿರ್ವಹಣೆ ಚಟುವಟಿಕೆಗಳಿಗೆ ತಂಡವನ್ನು ರಚಿಸಲು ಅನುಮತಿ, ತರಬೇತಿ ಆಯೋಜನೆಗೆ ಸಹಕಾರ ಪಡೆದುಕೊಳ್ಳಲಾಗಿದೆ. ತಾಲ್ಲೂಕು ತಹಶೀಲ್ದಾರರನ್ನು ಪ್ರತೀ ಘಟಕಗಳ ಉದ್ಘಾಟನೆಗೆ ಆಹ್ವಾನಿಸಿ ಅವರ ಸಲಹೆ-ಸೂಚನೆ ಪಡೆದುಕೊಳ್ಳಲಾಗಿದೆ.

## ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ

ವಿಪತ್ತು ನಿರ್ವಹಣೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸ್ವಯಂಸೇವಕರಿಗೆ ನೀಡಲು ಪ್ರಾಕೃತಿಕ ದುರಂತಗಳು ಮತ್ತು ನಿರ್ವಹಣೆ ಎನ್ನುವ ಮಾಹಿತಿ ಕೈಪಿಡಿ ರಚಿಸಿ ಎಲ್ಲಾ ಸ್ವಯಂಸೇವಕರಿಗೆ ವಿತರಿಸಲಾಗಿದೆ. ವಿವಿಧ ವಿಪತ್ತು ನಿರ್ವಹಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಪತ್ರವನ್ನು ತಯಾರಿಸಲಾಗಿದೆ. ತರಬೇತಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಸಂಗ್ರಹಿಸಿದ್ದು ತರಬೇತಿಯ ಸಂದರ್ಭದಲ್ಲಿ ಸ್ವಯಂಸೇವಕರಿಗೆ ವಿತರಿಸಲಾಗಿದೆ.

### ವರದಿ ವರ್ಷದಲ್ಲಿ ವಿಪತ್ತು ನಿರ್ವಹಣಾ ವಿಭಾಗದ ಕಾರ್ಯಕ್ರಮಗಳಿಗೆ ತಗಲಿದ ಖರ್ಚುವೆಚ್ಚಗಳ ವಿವರ

| ಕ್ರ.ಸಂ | ವಿಷಯ | ಮೊತ್ತ |
|---|---|---|
| 1 | ಸಂಯೋಜಕರ ತರಬೇತಿ | 1,92,846.00 |
| 2 | ಸಂಯೋಜಕರ ಸಭೆ | 46,451.00 |
| 3 | ಸ್ವಯಂ ಸೇವಕರ ತರಬೇತಿ | 12,79,100.00 |
| 4 | ಮಾಸಿಕ ಸಭೆ | 2,23,778.00 |
| 5 | ರಕ್ಷಣಾ ಪರಿಕರಗಳ ಖರೀದಿ | 28,28,505.00 |
| 6 | ವಿಪತ್ತಿನ ತುರ್ತು ಸ್ಪಂದನೆ ಚಟುವಟಿಕೆಗಳು | 54,637.00 |
| 7 | ಸಮವಸ್ತ್ರ ಖರೀದಿ | 12,35,312.00 |
| | ಒಟ್ಟು | 58,60,629.00 |

## ಸುತ್ತೋಲೆಗಳು

ವಿಪತ್ತು ನಿರ್ವಹಣಾ ಕಾರ್ಯಕ್ರಮದ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕರ ಮೂಲಕ ಹಾಗೂ ವೇದಿಕೆಯ ಮೂಲಕ ಸುತ್ತೋಲೆಗಳನ್ನು ನೀಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | 31/EDOO/2020-21<br>21-05-2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮ ಆರಂಭಿಸುವ ಕುರಿತು. |
| 2 | JJRD/28/2020-21<br>06-08-2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನ ಕುರಿತು. |
| 3 | 95/EDOO/2020-21<br>08-08-2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಅನುಷ್ಠಾನದ ಕುರಿತು |
| 4 | 51/JJRO/20-21<br>03-10-2020 | ಅಕ್ಟೋಬರ್ 13 ಅಂತರಾಷ್ಟ್ರೀಯ ವಿಪತ್ತು ನಿರ್ವಹಣಾ ದಿನಾಚರಣೆ ಕಾರ್ಯಕ್ರಮ ಆಚರಿಸುವ ಕುರಿತು. |
| 5 | 52/JJRO/2020-21<br>06-10-2020 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಮಾಹಿತಿ ನೀಡುವ ಹಾಗೂ ಸಂಯೋಜಕರ ಸಭೆ ಆಯೋಜಿಸುವ ಕುರಿತು. |
| 6 | 96/JJRO/20-21<br>07-12-2020 | ವಿಪತ್ತು ನಿರ್ವಹಣೆ ಸಂಯೋಜಕರ ತರಬೇತಿ ಆಯೋಜನೆಯ ಕುರಿತು. |
| 7 | 97/JJRO/20-21<br>07-12-2020 | ವಿಪತ್ತು ನಿರ್ವಹಣೆ ಸಂಯೋಜಕರ ತರಬೇತಿ ಆಯೋಜನೆಯ ಕುರಿತು. |
| 8 | 18/20-21<br>28-12-2020 | ವಿಪತ್ತು ನಿರ್ವಹಣಾ ಸ್ವಯಂಸೇವಕರ / ಸಂಯೋಜಕರ ತರಬೇತಿ ಆಯೋಜನೆಯ ಕುರಿತು. |

| | | |
|---|---|---|
| 9 | 276/20-21<br>28-12-2020 | ವಿಪತ್ತು ನಿರ್ವಹಣೆ ಘಟಕಗಳ ಸ್ವಯಂಸೇವಕರ ತರಬೇತಿ ಆಯೋಜನೆಯ ಕುರಿತು. |
| 10 | 127/20-21<br>20-01-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಮತ್ತು ಸಂಯೋಜಕರ ಮಾಸಿಕ ಸಭೆ ಆಯೋಜಿಸುವ ಕುರಿತು. |
| 11 | 140/JJRO/20-21<br>06-02-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಡೈರೆಕ್ಟರಿ ಮತ್ತು ಕಾರ್ಯಕ್ರಮದ ವಾರ್ಷಿಕ ವರದಿ ತಯಾರಿಗೆ ಮಾಹಿತಿಯನ್ನು ಒದಗಿಸುವ ಕುರಿತು. |
| 12 | 141/JJRO/20-21<br>06-02-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಡೈರೆಕ್ಟರಿ ಮತ್ತು ಕಾರ್ಯಕ್ರಮದ ವಾರ್ಷಿಕ ವರದಿ ತಯಾರಿಗೆ ಮಾಹಿತಿಯನ್ನು ಯೋಜನಾ ಕಚೇರಿಯಿಂದ ಪಡೆದುಕೊಳ್ಳುವ ಕುರಿತು. |
| 13 | 119/JJRO/20-21<br>11-02-2021 | ತಾಲೂಕು ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಅಗತ್ಯವಿರುವ ಉಪಕರಣಕ್ಕೆ ಬೇಡಿಕೆ ಪತ್ರ ಕಳುಹಿಸುವ ಕುರಿತು. |
| 14 | 142/ JJRO/20-21<br>17-02-2021 | ಗುಣಮಟ್ಟದ ಫೋಟೋಗಳನ್ನು ವಿಪತ್ತು ನಿರ್ವಹಣೆ ಸ್ವಯಂಸೇವಕರ ಡೈರೆಕ್ಟರಿಗೆ ಒದಗಿಸುವ ಕುರಿತು. |
| 15 | 143/ JJRO/20-21<br>20-02-2021 | ವಿಶೇಷ ಆರೋಗ್ಯರಕ್ಷಾ ವಿಮೆಯನ್ನು ವಿಪತ್ತು ನಿರ್ವಹಣಾ ತಂಡದ ಸ್ವಯಂಸೇವಕರಿಗೆ ನೋಂದಾವಣೆ ಮಾಡುವ ಕುರಿತು. |
| 16 | 144/ JJRO/20-21<br>05-03-2021 | ಸಂಪೂರ್ಣ ಸುರಕ್ಷಾ ವಿಮೆಯ ಬಗ್ಗೆ ವಿಪತ್ತು ನಿರ್ವಹಣೆ ತಂಡದ ಸದಸ್ಯರಿಗೆ ಸರಿಯಾದ ಮಾಹಿತಿ ನೀಡಿರುವ ಕುರಿತು ಮೇಲ್ವಿಚಾರಕರಿಂದ ದೃಢೀಕರಣ ನೀಡುವ ಕುರಿತು. |
| 17 | 142/ JJRO/20-21<br>19-03-2021 | ವಿಪತ್ತು ನಿರ್ವಹಣೆ ಸಂಯೋಜಕರ ಮತ್ತು ಸ್ವಯಂಸೇವಕರ ತರಬೇತಿ ಆಯೋಜನೆಯ ಕುರಿತು. |
| 18 | 144/20-21<br>22-03-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಹೊಸ ನೋಂದಾವಣೆ ಬಗ್ಗೆ. |
| 19 | 145/20-21<br>22-03-2021 | ವಿಪತ್ತು ನಿರ್ವಹಣಾ ಕೇಂದ್ರಗಳಿಗೆ ಸಲಕರಣೆ/ ಪರಿಕರಗಳನ್ನು ಖರೀದಿಸಲು ಅನುಮತಿ ಮತ್ತು ತಗಲುವ ಮೊತ್ತ ಮಂಜೂರಾತಿ ನೀಡುವ ಕುರಿತು. |
| 20 | 147/20-21<br>29-03-2021 | ವಿಪತ್ತು ನಿರ್ವಹಣಾ ಕೇಂದ್ರಗಳಿಗೆ ಖರೀದಿಸಿದ ಸಲಕರಣೆ/ ಪರಿಕರಗಳನ್ನು ಮೊತ್ತವನ್ನು ವರ್ಗಾವಣೆ ಮಾಡುವ ಕುರಿತು. |
| 21 | 05/ JJRO/20-21<br>08-04-2021 | ವಿಪತ್ತು ನಿರ್ವಹಣೆ ಸಂಯೋಜಕರ ತರಬೇತಿ ಆಯೋಜನೆಯ ಕುರಿತು. |
| 22 | 07/ JJRO/20-21<br>08-04-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ಹೊಸ ನೋಂದಾವಣೆಯ ಹಾಗೂ ಆಸಕ್ತಿ ಇಲ್ಲದ ಸ್ವಯಂಸೇವಕರನ್ನು ಕೈಬಿಟ್ಟಿರುವ ಮಾಹಿತಿಯನ್ನು ಕಳುಹಿಸಿಕೊಡುವ ಬಗ್ಗೆ. |
| 23 | 06/ JJRO/20-21<br>08-04-2021 | ವಿಪತ್ತು ನಿರ್ವಹಣೆ ಸ್ವಯಂಸೇವಕರ ತರಬೇತಿ ಆಯೋಜನೆಯ ಕುರಿತು. |
| 24 | 08/ JJRO/20-21<br>17-04-2021 | ವಿಪತ್ತು ನಿರ್ವಹಣೆ ಘಟಕಗಳ ಮಾಸಿಕ ವರದಿಯನ್ನು ತಯಾರಿಯ ಜವಾಬ್ದಾರಿ ವಹಿಸಿಕೊಳ್ಳುವ ಕುರಿತು. |
| 25 | 09/ JJRO/20-21<br>17-04-2021 | ವಿಪತ್ತು ನಿರ್ವಹಣೆ ಕಾರ್ಯಕ್ರಮದ ಮಾಸಿಕ ವರದಿಯ ತಯಾರಿಯ ಜವಾಬ್ದಾರಿ ವಹಿಸಿಕೊಳ್ಳುವ ಕುರಿತು. |

# ವಿಪತ್ತು ನಿರ್ವಹಣೆ ಕಾರ್ಯಕ್ರಮದ ಯಶೋಗಾಥೆಗಳು






ಬೆಳ್ತಂಗಡಿ ತಾಲೂಕಿನ, ನಿಡ್ಲೆ ಗ್ರಾಮದ ಬಡ ಕುಟುಂಬಕ್ಕೆ ನೆರವಾಗಿ ಮಾನವೀಯತೆ ಮೆರೆದ ಜನಜಾಗೃತಿ ವೇದಿಕೆ ವಿಜಯವಾಣಿ ಪತ್ರಿಕೆಯ ಕಳಕಳಿಗೆ ಸ್ಪಂದಿಸಿದ ಹೇಮಾವತಿ ವಿ. ಹೆಗ್ಗಡೆಯವರು.






ಬೆಳ್ತಂಗಡಿ ತಾಲ್ಲೂಕಿನ ಕೊಲ್ಲಿ ಗ್ರಾಮದ ಶಾಂತಿಗುಡ್ಡೆ ಎಂಬಲ್ಲಿ ದಟ್ಟಾರಣ್ಯದಲ್ಲಿ ಕಣ್ಮರೆಯಾದ ವೃದ್ಧ; ಪತ್ತೆಹಚ್ಚಿದ ವಿಪತ್ತು ನಿರ್ವಹಣಾ ಸ್ವಯಂಸೇವಕರು



ರೆಕ್ಯ ಗ್ರಾಮದ ಗಿರಿಜಾರವರ ಬಡ ಕುಟುಂಬವೊಂದಕ್ಕೆ ಉಚಿತವಾಗಿ ಶೌಚಾಲಯ ರಚಿಸಿದ ಸ್ವಯಂಸೇವಕ.




ಉರಗ ತಜ್ಞ ಬೆಳಾಲುವಿನ ಸ್ವಯಂಸೇವಕ ಹರೀಶ್ ಗೌಡ



ದೇವಸ್ಥಾನಕ್ಕೆ ಬಾವಿ ತೆಗೆದ ಸುಳ್ಯ ತಾಲ್ಲೂಕಿನ ನೆಲ್ಲೂರು ಕೆಮ್ರಾಜೆ ಘಟಕದ ಸ್ವಯಂಸೇವಕರು





ಹುಲಿ ದಾಳಿಯಿಂದ ಗಾಯಗೊಂಡ ಆಕಳು: ಪ್ರಾಥಮಿಕ ಚಿಕಿತ್ಸೆ ನೀಡಿ ವಾರಸುದಾರರಿಗೆ ತಲುಪಿಸಿದ ಸ್ವಯಂಸೇವಕರು




ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆ ಗ್ರಾಮದ ಬಂಗಾರಪಲ್ಕೆಯಲ್ಲಿ ನಡೆದ ಗುಡ್ಡ ಕುಸಿತ ಸಂದರ್ಭ ಮಣ್ಣಿನಡಿ ಸಿಲುಕಿದ ಓರ್ವನ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ವಿಪತ್ತು ಸೇವಾ ಸ್ವಯಂಸೇವಕರು





ಉತ್ತರ ಪ್ರದೇಶ ಮೂಲದ ಅನಾಥ ವ್ಯಕ್ತಿಯನ್ನು ಅನಾಥಾಶ್ರಮಕ್ಕೆ ಸೇರಿಸಿ ಮಾನವೀಯತೆ ಮೆರೆದ ಸ್ವಯಂಸೇವಕರು

ಸಕಲೇಶಪುರ – ಅನಾರೋಗ್ಯದ ಕಾರಣದಿಂದ ಒಕ್ಕಲು ಮಾಡದೇ ಪಾಳು ಬಿಡಲು ನಿರ್ಧರಿಸಿದ ಭತ್ತದ ಬೆಳೆಯನ್ನು ಒಕ್ಕಲು ಮಾಡಿ ಧಾನ್ಯದ ರಾಶಿಯನ್ನು ರೈತನಿಗೆ ಒಪ್ಪಿಸಿದ ಸ್ವಯಂಸೇವಕರು





ಶ್ರಮದಾನದ ಮೂಲಕ ಕುಡಿಯುವ ನೀರಿನ ಬಾವಿ ತೆಗೆದ ಇಡಗುಂಜಿ ಘಟಕದ ಸ್ವಯಂಸೇವಕರು





ಅಪಾಯಕಾರಿಯಾದ ತೆರೆದ ಬಾವಿಯ ಸುತ್ತಲೂ ಬೇಲಿ ರಚಿಸಿದ ಭಟ್ಕಳ ವಿಪತ್ತು ನಿರ್ವಹಣೆ ಸ್ವಯಂಸೇವಕರು



ಕುಸಿದು ಬೀಳುವ ಹಂತದಲ್ಲಿದ್ದ ಮಡಂತ್ಯಾರುವಿನ ಆಲೆಕ್ಸ್‌ರವರ ಮನೆಯನ್ನು ಗುರುತಿಸಿ
ಹೊಸ ಮನೆ ರಚನೆಗೆ ಶ್ರಮದಾನ ನಡೆಸಿದ ಸ್ವಯಂಸೇವಕರು